# ಅಮ್ಮ ಬೆಕ್ಕು ಕುರ್ ಕುರಿ

■ ಚಂದ್ರಿಕಾ ಹೆಗಡೆ, ಮತ್ತಿಹಳ್ಳಿ
ಕಲೆ: ಸಂತೋಷ್ ಸಸಿಹಿತ್ಲು



ನಮ್ಮ ಮನೆಯಲೊಂದು ಬೆಕ್ಕು
ಅದರ ಹೆಸರು ಕುರ್ ಕುರಿ
ಇದ್ದವದಕೆ ಎರಡು ಮರಿ
ಗರಿಗರಿ, ಚಕ್ಕುಲಿ !

ಒಂದು ಬೆಳಗು ಬೇಗ ಎದ್ದು
ಹಾಲು ತಿಂಡಿ ಎಲ್ಲ ಬಿಟ್ಟು
ಹುಡುಕುತಿತ್ತು ಕುರ್ ಕುರಿ
ಅತ್ತ ಇತ್ತ ಎತ್ತಲೂ ಕಾಣುತಿಲ್ಲ ಗರಿಗರಿ
ಎಷ್ಟು ಹುಡುಕಿ ಸೋತರೂ ಸಿಕ್ಕುತಿಲ್ಲ ಚಕ್ಕುಲಿ

ಮನೆಯನೆಲ್ಲ ಸುತ್ತಿ ಸುಳಿದು
ರಸ್ತೆ ಪೂರಾ ತಿರುಗಿ ಬಂದು
ಮರವನೇರಿ ಸುತ್ತ ನೋಡಿ
ಕೂಗಿ ಕೂಗಿ ಕರೆದರೂ
ಎಲ್ಲೂ ಇಲ್ಲ ಗರಿಗರಿ, ಕಾಣಲಿಲ್ಲ ಚಕ್ಕುಲಿ!

ಹದ್ದು ಬಂದು ಕುಕ್ಕಿತೇ, ಕಾರಿನಡಿಗೆ ಸಿಕ್ಕಿತೇ
ಕದ್ದು ಬಂದ ಗಡವ ಬೆಕ್ಕು
ಕಚ್ಚಿಕೊಂಡು ಹೋಯಿತೇ?
ಹಿತ್ತಿಲಲ್ಲಿ ಕುಳಿತುಕೊಂಡು ಬಿಕ್ಕುತಿತ್ತು
ಕುರ್ ಕುರಿ

ಅಲ್ಲೇ ಪೊದೆಯ ಸಂದಿನಿಂದ
ಛಂಗನೆಂದು ಬಾಲ ಎತ್ತಿ
ಓಡಿಬಂತು ಚಕ್ಕುಲಿ
ಅದರ ಹಿಂದೆ ಗರಿಗರಿ
ಬಾಯಿಯಲ್ಲಿ ಕಚ್ಚಿಕೊಂಡು ಚಿಕ್ಕದೊಂದು ಜಿರಳೆಮರಿ

ಮ್ಯಾಂವ್... ಎಂದು ಓಡಿ ಬಂದು
ಮರಿಗಳನ್ನು ತಬ್ಬಿಕೊಂಡು
ಮೈಯ ನೆಕ್ಕಿ ಮುತ್ತು ಕೊಟ್ಟು
ಹೆಮ್ಮೆಯಿಂದ ನೋಡಿತು
ಅಮ್ಮ ಬೆಕ್ಕು ಕುರ್ ಕುರಿ

## ಕುಂಚ ಪ್ರಪಂಚ



ಇಶಾ ಕುಮಾರ್
1ನೇ ತರಗತಿ, ಕುಮಾರನ್ಸ್ ಸ್ಕೂಲ್, ಬೆಂಗಳೂರು

ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in







ನಿಧಿ ಪ್ರಸನ್ನ
4ನೇ ತರಗತಿ, ಎಂಇಎಸ್ ಸ್ಕೂಲ್, ಶಿರಸಿ